ಸಮುದ್ರ, ಶತಮಾನದ ದುಃಖ ಹರಿದಂತೆ ಬಿಕ್ಕಿ ಬಿಕ್ಕಿ ಅತ್ತ. ಅಳುತ್ತಲೆ "ಬಡತನ ತುಂಬಾ ಕೆಟ್ಟದ್ದು ಸರ್" ಎಂದ. ಬಾಯಿ ತುಂಬ ರಕ್ತ ಜಿನುಗಿದರೂ, ದೊಡ್ಡ ಧ್ವನಿ ಎತ್ತಿ ಅಳಹತ್ತಿದ. ತನ್ನ ಹೊಡೆತವನ್ನೆಲ್ಲ ಮೈ ಬಿಗಿದು ಸಹಿಸಿದ ಸಮುದ್ರ, ಈಗ ಮಗನಿಗೆ ಎರಡು ಹೊತ್ತು ಊಟಹಾಕದ ತನ್ನ ಸ್ಥಿತಿಗೆ ಬಿಕ್ಕಿ ಬಿಕ್ಕಿ ಅಳುವದನ್ನ ಗೋವಿಂದ ನೋಡಲಾರದಂತೆ ಮುಖ ತಿರುವಿದ.

ಟೇಬಲ್ ಹಿಂದಿದ್ದ ಪೊಲೀಸು ಪೇದೆ, "ಕಾಲೇಜು ಹುಡುಗಿಯರ ಸರ ಕಳುವಾಗಲ್ಲ ಸರ್. ಮೊಬೈಲಿಗೊ, ಪಾರ್ಟಿ ಡ್ರೆಸ್‌ಗೊ ಕಾಸು ಬೇಕಾದಾಗೆಲ್ಲ ಮಾರ್ಕೊಂಡ ಬಿಡುತ್ತಾವೆ. ಮನೆಯಲ್ಲಿ ಹೇಳೋಕಾಗಲ್ಲ, ಮನೆಯವರಿಗೆ ತಿಳಿಯೊಲ್ಲ. ಬಿಡಿ ಸಾರ್" ಎಂದು ನಕ್ಕ. ಮತ್ತೆ ಫೋನು ಗುಣಗುಣಿಸಿತು. ಮನೆಯಿಂದ ಸುಮತಿ. "ನಮ್ಮ ಕರ್ಮ. ನಿಮ್ಮ ಮಗನಿಗೆ 50 ಪರ್ಸಂಟ್ ಬಂದಿದೆ. ಗಣಿತದಲ್ಲಿ ಜಸ್ಟ್ ಪಾಸ್. ಯಾವ ಕಾಲೇಜಿನಲ್ಲೂ ಸೀಟು ಸಿಗೋದು ಕಷ್ಟ. ಎಂಜನಿಯರ್ ಅಲ್ಲ ಕಾನ್‌ಸ್ಟೆಬಲ್ ಆಗೋ ಹಾಗೂ ಕಾಣಲ್ಲ. ಯಾಕೋ ಅಂದರೆ, ಕೋಣೆಯ ಬಾಗಿಲು ಹಾಕಿಕೊಂಡು ಕಂಪ್ಯೂಟರ್ ಗೇಮ್ ಆಡ್ತಾ ಇದೆ. ನೀವೇ ಮಾತಾಡಿ" ಎಂದು ಬಿಕ್ಕಿದಳು. ಗೋವಿಂದ ಫೋನ್ ಕಟ್ ಮಾಡಿದ. ಮಗನಿಗೆ ಫೋನ್ ಮಾಡಿದರೆ 'ಸ್ವಿಚ್ ಆಫ್' ಅಂತ ಬಂದಿತು.

ಇದಾದ ಒಂದೆರಡು ತಿಂಗಳ ನಂತರ, ಗೋವಿಂದನಿಗೆ ಮತ್ತೆ ಸಮುದ್ರ ಕಂಡ. ದಾರಿ ಬದಿಯ ಪಾವ್‌ಭಾಜಿ ಅಂಗಡಿಯ ಮುಂದೆ. ಎಣ್ಣೆಹಾಕಿ ತಲೆ ಬಾಚಿಕೊಂಡು ಬಿಳಿ ಅಂಗಿ, ಬಿಳಿ ಲುಂಗಿಯಲ್ಲಿ ಈಗಷ್ಟೇ ಹೊಸದಾಗಿ ಹುಟ್ಟಿದಂತಿದ್ದ. ಗೋವಿಂದನ ನೋಡಿದ್ದೇ, ಮೈಬಗ್ಗಿಸಿ, "ಚೆನ್ನಾಗಿದ್ದಿರಾ ಸರ್. ದೇವ್ರು ನಿಮ್ಮನ್ನಾ ನಿಮ್ಮ ಮನೆಯವರ್ನ ಚೆನ್ನಾಗಿ ಇಟ್ಟಿರಲಿ. ಇವನು ನನ್ನ ಮಗ ಸಾರ್, ವೀರಬಾಹು ಅಂತ ಹೆಸರು'' ಎಂದು ಪರಿಚಯಿಸಿವನು, "ಸಾಹೇಬರಿಗೆ ನಮಸ್ಕಾರ ಮಾಡೋ" ಎಂದ ಸಮುದ್ರ. ವೀರಬಾಹು ಬಗ್ಗಿ ಕಾಲು ಮುಟ್ಟಿದ. "ನಿಮ್ಮ ಆಶೀರ್ವಾದ ಬೇಕು ಸಾರ್. ಇವನಿಗೆ ಪಾವ್‌ಭಾಜಿ ಬಹಳ ಇಷ್ಟ ಸಾರ್. ಅವನಮ್ಮಂಗೆ ಕಾಲಿಫ್ಲವರ್ ತಂದು ಕೊಡಾಕೆ ನನ್ನ ಕೈಲಾಗಲ್ಲ. ಬಹಳ ತುಟ್ಟಿ ಸರ್" ಅಂದ. ಟಪರಿಯ ಪಾವ್‌ಭಾಜಿಯ ವಾಸನೆ ಅಲ್ಲೆಲ್ಲ ಹಬ್ಬಿಕೊಂಡಿತ್ತು. "ಮುಂದೆ ಏನಾಗ್ತೀಯೋ ಅಂದರೆ ನಿಮ್ಮನ್ನೆಲ್ಲಾ ಕರೆದುಕೊಂಡು ಅಮೆರಿಕಾಕ್ಕೆ ಹೋಗ್ತೀನಿ ಅಂತಾನೆ. ನಮ್ಮ ದೇಶಾನೆ ವಾಸಿ ಅಂತ ಸ್ವಲ್ಪ ಹೇಳಿ ಸರ್" ಎಂದು ಬೇಡಿದ.

ಸಮುದ್ರನ ಬದಿಗೆ ಕರೆದು, ಗೋವಿಂದ, ''ಸಾರಿ ಸಮುದ್ರ ಅವತ್ತು ನಿನಗೆ ತುಂಬಾ ತೊಂದರೆ ಕೊಟ್ಟೆ. ತುಂಬಾ ನೋವಾಗಿರಬೇಕಲ್ಲ'' ಅಂದ. "ಬಡವರಿಗೆ ಎಂತಾ ತೊಂದರೆ ಎಂತಾ ನೋವು ಸರ್. ಅದು ನಿಮ್ಮ ಕೆಲಸವಲ್ಲವಾ" ಎಂದು ಕೈಮುಗಿದ ಸಮುದ್ರ.

## ಅಶೋಕ ಹೆಗಡೆ

ಕವಿ, ಕತೆಗಾರ, ಕಾದಂಬರಿಕಾರ ಅಶೋಕ ಹೆಗಡೆ ಸಿದ್ದಾಪುರದ ಗುಂಜಗೋಡಿನವರು. 'ಒಂದು ತಗಡಿನ ಚೂರು', 'ಒಳ್ಳೆಯವನು', 'ವಾಸನೆ, ಶಬ್ದ, ಬಣ್ಣ, ಇತ್ಯಾದಿ' ಕಥಾ ಸಂಗ್ರಹಗಳನ್ನು, 'ಅಶ್ವಮೇಧ' ಎಂಬ ಕಾದಂಬರಿಯನ್ನು, 'ಕುರುಡು ಕಾಂಚಾಣ' ಎಂಬ ಅಂಕಣ ಬರಹಗಳ ಪುಸ್ತಕವನ್ನು ಪ್ರಕಟಿಸಿದ್ದಾರೆ. ವೃತ್ತಿನಿಮಿತ್ತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.